




ಹೌದು. ಋತುಮತಿಯರಾದ ವಿದ್ಯಾರ್ಥಿನಿಯರನ್ನು ತರಗತಿಯಿಂದ ಹೊರಗೆ ಕುಳ್ಳಿರಿಸಿದ ಘಟನೆ ತಮಿಳುನಾಡಿನಲ್ಲಿ ನಡೆದ ವರದಿಯಾಗಿದೆ. ಅದೇ ರೀತಿ ರಾಜ್ಯದಲ್ಲಿಯೂ ಅಲ್ಲೊಂದು ಇಲ್ಲೊಂದು ಘಟನೆಗಳು ನಡೆದಿವೆ. ಕೆಲವೊಂದು ಸಮುದಾಯದಲ್ಲಿ ಮುಟ್ಟಿಗೆ ಸಂಬಂಧಿಸಿದ ನಿಯಮಗಳು ಅತ್ಯಂತ ಕಠಿಣವಾಗಿವೆ. ಇದರಿಂದ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಶಾಲೆಯಲ್ಲಿ ಶಿಕ್ಷಕರು ಮತ್ತು ಸಾಮಾಜಿಕ ಕಾರ್ಯಕರ್ತರು ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಲೇ ಇರಬೇಕು. ಶಿಕ್ಷಕರು ಸ್ವತಃ ಸಂವೇದನಾಶೀಲರಾಗಿರಬೇಕು ಮತ್ತು ಪೋಷಕರಿಗೆ ತಿಳಿಹೇಳುವ ಕಾರ್ಯಕ್ರಮಗಳು ನಡೆಯಬೇಕು.

**-ತಿಪ್ಪೇಸ್ವಾಮಿ ಕೆ.ಟಿ.**

ಸದಸ್ಯರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ತಕ್ಷಣ ಆಕೆಯ ಶೈಕ್ಷಣಿಕ ಜೀವನವು ತುಸು ಡೋಲಾಯಮಾನವಾಗಿದೆ ಎಂದೇ ಅರ್ಥ' ಎನ್ನುತ್ತಾರೆ ಶಿಕ್ಷಕಿ ಶಿವಲೀಲಾ.

ಶಿವಲೀಲಾ ಅವರು ಹೇಳುವ ವಿಚಾರದ ಮತ್ತೊಂದು ಮಗ್ಗುಲನ್ನು ತೆರೆದಿಡುತ್ತಾರೆ 'ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ'ದ ಸದಸ್ಯರಾದ ಎಚ್.ಸಿ. ರಾಘವೇಂದ್ರ. 'ತಮಿಳುನಾಡಿನಲ್ಲೇನೋ ಋತುಮತಿಯಾದ ಹುಡುಗಿಯೊಬ್ಬಳನ್ನು ತರಗತಿಯಿಂದ ಹೊರಗೆ ಕುಳ್ಳಿರಿಸಿದ ವಿಚಾರ ಸುದ್ದಿಯಾಯಿತು. ನಾನು ಬಳ್ಳಾರಿಯ ಶಿರಗುಪ್ಪ, ಕಂಪ್ಲಿ, ಕುರಗೋಡು ಪ್ರದೇಶಗಳಲ್ಲಿ ಹಲವು ವರ್ಷಗಳ ಕಾಲ ಕೆಲಸ ಮಾಡಿದ್ದೆ. ಆ ಸಂದರ್ಭದಲ್ಲಿ ನಾನು ಗಮನಿಸಿದ ಪ್ರಕಾರ, ಋತುಮತಿಯರಾದ ಹುಡುಗಿಯರು ಶಾಲೆಗೆ ಬರುವುದನ್ನೇ ನಿಲ್ಲಿಸಿಬಿಡುತ್ತಾರೆ. ಇದಂತೂ ಅಸ್ಪೃಶ್ಯತೆಗಿಂತಲೂ ವಿಪರೀತವಾದ ನಡೆ ಎನ್ನಬೇಕು. ಹುಡುಗಿಯರು ಋತುಮತಿಯಾದರೆ ಶಿಕ್ಷಣದಿಂದಲೇ ವಂಚಿತಳಾಗುತ್ತಾಳೆ ಎಂದರೆ ಅವಳ ಭವಿಷ್ಯದ ಗತಿಯೇನು? ಹತ್ತು–ಹನ್ನೆರಡು ವಯಸ್ಸಿನಲ್ಲಿ ಋತುಮತಿಯರಾಗುವ ಹುಡುಗಿಯರು ಶಾಲೆಗೆ ಬರುವುದನ್ನು ನಿಲ್ಲಿಸಿದರೆ ಮನೆಯಲ್ಲಿ ಅವರನ್ನು ಪಾಲಕರು ಹೆಚ್ಚು ಸಮಯ ಉಳಿಸಿಕೊಳ್ಳಲು ಇಷ್ಟಪಡುವುದಿಲ್ಲ. ಆದಷ್ಟು ಬೇಗ ಹುಡುಗನನ್ನು ಗೊತ್ತು ಮಾಡಿ ಮದುವೆ ಮಾಡುತ್ತಾರೆ. ಅಂದರೆ ಬಾಲ್ಯವಿವಾಹ ಮಾಡಿ ತಮ್ಮ ಜವಾಬ್ದಾರಿ ಕಳೆಯಿತು ಎಂದು ನಿರಾಳರಾಗುತ್ತಾರೆ. ಸಾಕಷ್ಟು ಶಿಕ್ಷಣವಿಲ್ಲದೆ, ಆರೋಗ್ಯದ ಕುರಿತು ಸ್ವಯಂ ಅರಿವಿಲ್ಲದೆ, ಸಂಸಾರದ ಹೊಣೆಗಾರಿಕೆಯನ್ನು ಅರಿತುಕೊಳ್ಳುವ ಮುನ್ನವೇ ಅದರ ಜವಾಬ್ದಾರಿಯನ್ನು ಬಾಲಕಿಯ ಹೆಗಲಿಗೇರಿಸಿಕೊಳ್ಳಬೇಕಾಗುತ್ತದೆ. ಇದೊಂದು ವಿಷವರ್ತುಲವಲ್ಲದೆ ಮತ್ತೇನು?' ಎಂದು ರಾಘವೇಂದ್ರ ಪ್ರಶ್ನಿಸುತ್ತಾರೆ.

## ಭಾಷಣಗಳಷ್ಟೇ ಸಾಲದು...

ಬೀದರ್ ಜಿಲ್ಲೆಯು ಶೈಕ್ಷಣಿಕವಾಗಿ ತುಸು ಸುಧಾರಣೆಯನ್ನು ಕಂಡಿರುವುದಾಗಿ ಹೆಗ್ಗಳಿಕೆಯಿದ್ದರೂ ಸಾಗಬೇಕಾದ ದಾರಿ ಇನ್ನೂ ಇದೆ ಎಂದು ಅನಿಸುತ್ತದೆ. ಬೀದರ್‌ನಲ್ಲಿ ಪ್ರಸ್ತುತ 'ಸಿಡಬ್ಲ್ಯುಸಿ' ಸದಸ್ಯೆಯಾಗಿರುವ ಶಾಲಿನಿ ಫ್ಲಾರೆನ್ಸ್